# *1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

***ಎಸ್‌ಸಿ.* 13 / 2019**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅನಂತರಾಜು |
| ತಂದೆ/ಗಂಡನ ಹೆಸರು | ಃ | ರಾಮಸ್ವಾಮಿ |
| ವಯಸ್ಸು | ಃ | 62 ವರ್ಷ |
| ವೃತ್ತಿ | ಃ | ವ್ಯವಹಾರ |
| ವಾಸ ಸ್ಥಳ | ಃ | ಹಳ್ಳದ ಕೆರೆ |

*ಪ್ರಮಾಣ ಮಾಡಿದ ದಿನಾಂಕಃ*

**07.12.2019**

ಪ್ರಾ.ಸಾ. ಃ 1

ಚಾ.ಸಾ. ಃ 1

***ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ***

ಚಾಸಾ-*2* ರಾಜಗೋಪಾಲ್ ನನ್ನ ತಮ್ಮ. ಚಾಸಾ-*3* ರವಿ ಎನ್ನುವರ ಪರಿಚಯ ಇದೆ. ನನಗೆ *1* ನೇ ಆರೋಪಿ ಹನುಮಂತ ಪಾಟೀಲ್ ಪರಿಚಯ ಇದೆ. ಘಟನೆಯ ಒಂದು ವರ್ಷದ ಮುಂಚೆ ನನಗೆ *1* ನೇ ಆರೋಪಿ ಪರಿಚಯ. *1* ನೇ ಆರೋಪಿ ನನ್ನಿಂದ *7* ಲಕ್ಷ ರೂಗಳನ್ನು ಸಾಲವಾಗಿ ದಿನಾಂಕ *15.06.2014* ರಂದು ಪಡೆದಿದ್ದರು. ಈ ಕುರಿತು ನಾನು *1* ನೇ ಆರೋಪಿಯೊಂದಿಗೆ ಸಾಲದ ಒಪ್ಪಂದ*(*ಅಗ್ರಿಮೆಂಟ್*)* ಮಾಡಿಕೊಂಡಿದ್ದೆ. ಸಾಲ ಪಡೆದ *6-7* ತಿಂಗಳ ನಂತರ *1* ನೇ ಆರೋಪಿ ನನಗೆ *3* ಚೆಕ್ಕುಗಳನ್ನು ಕೂ ೆಟ್ಟಿದ್ದು, ಅವುಗಳ ಒಟ್ಟು ಮೊತ್ತ *4,82,000/-* ಆಗಿರುತ್ತದೆ. ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಕಿದಾಗ ಅದು ಇನ್ ಸಫಿಷಿಯಂಟ್ ಫಂಡ್ ಎಂದು ನನಗೆ ವಿಜಯ ಬ್ಯಾಂಕ್ ನಿಂದ ಹಿಂಬರಹ ಬಂದಿತ್ತು. *1* ನೇ ಆರೋಪಿ ಕೊಟ್ಟ ಚೆಕ್ಕುಗಳು ಕೆನರಾ ಬ್ಯಾಂಕಿನ ಚೆಕ್ಕುಗಳಾಗಿದ್ದವು. ನಂತರ ನಾನು ಮೊದಲನೇ ಆರೋಪಿಗೆ ನಮ್ಮ ವಕೀಲರಿಂದ ನೋಟೀಸ್ ಕಳುಹಿಸಿದೆ. ನಾನು ನೋಟೀಸ್ ಕುಳುಹಿಸಿದ ನಂತರವು *1* ನೇ ಆರೋಪಿ ನನಗೆ ಹಣ ಕೊಡಲಿಲ್ಲ. ದ. *13.06.2015* ರಂದು ನನ್ನನ್ನು *1* ನೇ ಆರೋಪಿ ಹಾಗೂ ಅವರ ಜೊತೆ *4* ಸಹಚರರು ನನ್ನನ್ನು ಹಾಲನಹಳ್ಳಿ ಸೈಟಿನಿಂದ ಅಪಹರಿಸಿದರು. ದಿನಾಂಕ *13.06.2015* ಕ್ಕಿಂತ ಮುಂಚೆ ಅಂದರೆ ಒಂದು ವಾರ ಮೊದಲು ನನಗೆ *2* ನೇ ಆರೋಪಿ ಶ್ರೀನಿವಾಸ್ ಕರೆ ಮಾಡಿ, ನನ್ನ ಹಾಲನಹಳ್ಳಿಯ ಸೈಟನ್ನು ಮಾರಿಸಿಕೊಡುವುದಾಗ ಹೇಳಿದರು. ನಾನು ಒಪ್ಪಿಕೊಂಡು ಹಾಲನಹಳ್ಳಿ ಸೈಟಿಗೆ ಹೋದೆ, ಆಗ *2* ನೇ ಆರೋಪಿ ನನ್ನನ್ನು ಬೇಟಿ ಮಾಡಿ ನನ್ನ ಸೈಟನ್ನು ಪರಿಶೀಲಿಸಿ ಬೆಂಗಳೂರಿನಿಂದ ಖರೀದಿದಾರರು

ಮುಂದಿನ ವಾರ ಬರುತ್ತಾರೆ ನಾನು ನಿಮ್ಮ ಸೈಟನ್ನು ಮಾರಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು. ದಿನಾಂಕ *13.06.2015* ರಂದು *2* ನೇ ಆರೋಪಿಗೆ ನಾನು ಬೆಳಿಗ್ಗೆ *11.30* ಗೆ ಫೋನ್ ಮಾಡಿದೆ, ಆಗ *2* ನೇ ಆರೋಪಿ ನನಗೆ ಸೈಟ್ ಹತ್ತಿರ ಬನ್ನಿ ಖರೀದಿದಾರರು ಬರುತ್ತಾರೆ ಎಂದು ತಿಳಿಸಿದರು. ನಾನು ಬೆಳಿಗ್ಗೆ *12.30* ಗೆ ಸೈಟ್ ಹತ್ತಿರ ನಾನು ಹೋದೆ. ಸುಮಾರು *10-15* ನಿಮಿಷಗಳವರೆಗೆ ನಾನು ಮತ್ತು *2* ನೇ ಆರೋಪಿ ಶ್ರೀನಿವಾಸ್ ಮಾತನಾಡುತ್ತಾ ನಿಂತಿದ್ದೆವು. ಆಗ *2* ನೇ ಆರೋಪಿ ಯಾರಿಗೋ ಫೋನ್ ಮಾಡಿದರು, ನಂತರ *4* ಜನ ಕಾರಿನಲ್ಲಿ ಬಂದರು. ಇಂದು ನ್ಯಾಯಾಲಯದ ಮುಂದೆ ಇರುವ ಆರೋಪಿಗಳೇ ಆ ದಿನ ಕಾರಿನಲ್ಲಿ ಬಂದವರು. ಆ *4* ಜನರಲ್ಲಿ ಒಬ್ಬನು ನನ್ನ ಹೊಂಡಾ ಆಕ್ಟಿವಾ ಸ್ಕೂಟರ್ ನ್ನು ತೆಗೆದುಕೊಂಡು ನಮ್ಮ ಬಾಸನ್ನು ಕರೆದುಕೊಂಡು ಬರುತ್ತೇನೆ ಎಂದು ಹೋದರು, ಮತ್ತೆ ತಿರುಗಿ ಬರಲಿಲ್ಲ. ಅವರ ಬಾಸ್ ಇರುವ ಜಾಗದಲ್ಲಿ ನನ್ನನ್ನು ಕರೆದುಕೊಂಡು ಹೋಗುವುದಾಗಿ ಇನ್ನು ಮೂರು ಜನ *2* ನೇ ಆರೋಪಿ ಶ್ರೀನಿವಾಸ, *4* ನೇ ಆರೋಪಿ ಬದ್ರೀಶ್ ಇನ್ನೊಬ್ಬನು ನನ್ನನ್ನು ಕಾರಿನಲ್ಲಿ ಕರೆದುಕೊಂಡು ಹೋದರು. ನಾನು ಕಾರಿನಲ್ಲಿ ಕುಳಿತ ತಕ್ಷಣ ನನಗೆ ಮಚ್ಚು ಲಾಂಗ್ ನ್ನು ತೋರಿಸಿ, ಮಾತನಾಡಿದರೆ ಮುಗಿಸುತ್ತೇವೆ ಎಂದು ಬೆದರಿಕೆ ಹಾಕಿದರು. ನನ್ನ ಮೋಬೈಲ್ ಫೋನ್ ನ್ನು ತೆಗೆದುಕೊಂಡು ಅದನ್ನು ಪೂರ್ತಿಯಾಗಿ ಮುರಿದು ಹಾಕಿದರು. ನನ್ನನ್ನು ನರಸಿಪುರ ರಸ್ತೆಗೆ ಕರೆದುಕೊಂಡು ಹೋದರು. ಅಲ್ಲಿ ಒಂದು ಸೇತುವೆ ಇದ್ದು ಅದರ ಪಕ್ಕದಲ್ಲಿ ಇದ್ದ ಒಂದು ಕಚ್ಚಾ ರಸ್ತೆಗೆ ಕರೆದುಕೊಂಡು ಹೋದರು. ನಂತರ ಅಲ್ಲಿ ಒಂದು ಸರ್ಕಾರಿ ಪ್ರೌಡ ಶಾಲೆ ಇದ್ದು, ಅಲ್ಲಿ ನನ್ನನ್ನು ಕರೆದುಕೊಂಡು ಹೋದರು. ನಂತರ ಅಲ್ಲಿಗೆ *1* ನೇ ಆರೋಪಿ ಹನುಮಂತ ಪಾಟೀಲನ್ನು ದೂರವಾಣಿ ಮುಖಾಂತರ ಕರೆ ಮಾಡಿ ಕರೆಸಿದರು. ನಂತರ ನನ್ನನ್ನು ಕಾರಿನಲ್ಲಿಯೇ ಕೂರಿಸಿ, ನಾಲ್ಕು ಜನ *1* ನೇ ಆರೋಪಿ ಹನುಮಂತ ಪಾಟೀಲ್ ಜೋತೆ ಮಾತನಾಡುತ್ತಾ ಕುಳಿತರು. ನಂತರ ನನಗೆ *25* ಲಕ್ಷ ಹಣ ಕೊಡಿ ಇಲ್ಲದಿದ್ದರೆ ನಿಮ್ಮನ್ನು ಮುಗಿಸಿ ಬಿಡುತ್ತೇನೆ ಎಂದು ಹೇಳಿದರು. ನಾನು ನನ್ನ ಹತ್ತಿರ ಅಷ್ಟೊಂದು ದುಡ್ಡು ಇಲ್ಲ, ನಾನು ಎಲ್ಲಿಂದ ತರುವುದು ಬೇಕಾದರೆ, ನನ್ನ ಸೈಟನ್ನು ನಿಮಗೆ ಬರೆದುಕೊಡುತ್ತೇನೆ ಎಂದು ಹೇಳಿದೆ. ನನ್ನ ಸೈಟಿನ ಸೇಲ್ ಡೀಡ್ ನ ಜೆರಾಕ್ಸ ಪ್ರತಿ, ಜೆರಾಕ್ಸ *11* ಬಿ ಖಾತೆ ಎಕ್ಸಟ್ರಾಕ್ಟ, ಮೂಲ ಪಟ್ಟಾ ಬುಕ್, ಕಂದಾಯ ರಶೀದಿಗಳ ಜೆರಾಕ್ಸ ಪ್ರತಿ, ಮನೆಯ ಬೀಗದ ಕೈಯನ್ನು ನನ್ನಿಂದ ತೆಗೆದುಕೊಂಡು, ನಂತರ

ಒಂದು ಖಾಲಿ ಬಾಂಡ್ ಪೇಪರ್ ಮೇಲೆ ನನ್ನ ಹೆಬ್ಬೆಟ್ಟು ಗುರುತು ಹಾಗೂ ಸಹಿಯನ್ನು ತೆಗೆದುಕೊಂಡರು. ನಂತರ *5* ಲಕ್ಷ ನಗದು ಈಗಲೇ ಬೇಕು ಎಂದು ಹೇಳಿದರು. ಆಗ ನಾನು ನನ್ನ ಹತ್ತಿರ *5* ಲಕ್ಷ ಇಲ್ಲ, *1,50,000* ಹಣ ಮನೆಯಲ್ಲಿ ಇದೆ ಬೇಕಾದರೆ ಕೊಡುತ್ತೇನೆ ಎಂದು ಹೇಳಿದೆ. ನಂತರ ಆರೋಪಿಗಳು ನನ್ನನ್ನು ಕಾರಿನಲ್ಲಿ ಕರೆದುಕೊಂಡು ಹಾಲನಹಳ್ಳಿ ಮುಖ್ಯ ರಸ್ತೆಗೆ ಕರೆದುಕೊಂಡು ಬಂದರು, ಮೊದಲು ನನ್ನ ಸ್ಕೂಟರ್ ನ್ನು ತೆಗೆದುಕೊಂಡು ಹೋದ ವ್ಯಕ್ತಿ ಸದರಿ ಸ್ಕೂಟರನ್ನು ತೆಗೆದುಕೊಂಡು ನಮ್ಮನ್ನು ಹಿಂಬಾಲಿಸಿಕೊಂಡು ಹಾಲನಹಳ್ಳಿ ಮುಖ್ಯ ರಸ್ತೆಗೆ ಬಂದನು. *1* ನೇ ಆರೋಪಿ ಸದರಿ ಶಾಲೆಯಿಂದಲೇ ವಾಪಸ್ಸು ಹೋದನು. *2* ನೇ ಆರೋಪಿ ನನ್ನನ್ನು ಸ್ಕೂಟರ್ ನಲ್ಲಿ ನಾನು ವಾಸವಾಗಿರುವ ಮನೆಗೆ ಕರೆದುಕೊಂಡು ಹೋದನು. ನಾವು ಮನೆಗೆ ಬಂದಾಗ ರಾತ್ರಿ *8.30* ಗಂಟೆ ಆಗಿತ್ತು. ಮನೆಯಲ್ಲಿ ನನ್ನ ಹೆಂಡತಿ ಮತ್ತು ನನ್ನ ತಮ್ಮ ಚಾಸಾ-*2* ರಾಜಗೋಪಾಲ್ ಹಾಗೂ ನನ್ನ ಹತ್ತಿರ ಇದ್ದ ಹಣ ಸುಮಾರು ಒಂದುವರೆ ಲಕ್ಷವನ್ನು ತೆಗೆದುಕೊಂಡು, ಮಿಕ್ಕಿದ ಹಣವನ್ನು ಮಂಗಳವಾರ ಅಥವಾ ಬುಧವಾರ ಕೊಡಬೇಕು ಎಂದು ಹೇಳಿ ಎಚ್ಚರಿಕೆ ಕೊಟ್ಟು ಹೋದನು. ನನಗೆ ಹೊರಗಡೆ ಹೋಗಲು ಭಯವಾದ್ದರಿಂದ ನಾನು ಮರುದಿನ ಸಂಜೆ ದಿನಾಂಕ *14.06.2015* ರಂದು ನಜರ್ ಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದೆ. ನನಗೆ ಆರೋಪಿಗಳು ಈ ವಿಚಾರವನ್ನು ಯಾರಿಗೂ ತಿಳಿಸಕೂಡದು ಎಂದು ಎಚ್ಚರಿಕೆ ಕೊಟ್ಟಿದ್ದರು. ನಾನು ಸದರಿ ದೂರನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ದೂರನ್ನು ನಿಪಿ-*1* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*1(ಎ)* ಎಂದು ಗುರುತಿಸಲಾಯಿತು. ದಿನಾಂಕ *15.06.2015* ರಂದು ಪೊಲೀಸ್ ರು ನನಗೆ ಬೆಳಿಗ್ಗೆ ಬರಲು ತಿಳಿಸಿದರು, ನಾನು ಬೆಳಿಗ್ಗೆ *11* ಗಂಟೆಗೆ *10* ನಿಮಿಷ ಮೊದಲು ನಾನು ಪೊಲೀಸ್ ಠಾಣೆಗೆ ನನ್ನ ತಮ್ಮ ರಾಜಗೋಪಾಲ ಮತ್ತು ನನ್ನ ಪರಿಚಯಸ್ಥ ಚಾಸಾ-*3* ರವಿ ಅವರನ್ನು ಕರೆದುಕೊಂಡು ಪೊಲೀಸ್ ಠಾಣಾೆಗೆ ಹೋದೆ. ನಂತರ ನಾನು ಪೊಲೀಸ್ ರನ್ನು ಹಾಲನಹಳ್ಳಿ ಸೈಟಿಗೆ ಕರೆದುಕೊಂಡು ಹೋದೆ. ನಾವೆಲ್ಲಾ ಪೊಲೀಸ್ ರ ಇಲಾಖಾ ಜೀಪಿನಲ್ಲಿಯೇ ಸೈಟಿಗೆ ಹೋದೆವು. ನಾನು ಪೊಲೀಸ್ ರಿಗೆ ನನ್ನನ್ನು ಅಪಹರಿಸಿದ ಸ್ಥಳವನ್ನು ತೋರಿಸಿದೆ. ಪೊಲೀಸ್ ರು ಸದರಿ ಸ್ಥಳವನ್ನು ಪರಿಶೀಲಿಸಿದರು. ನಂತರ ಸದರಿ ಸ್ಥಳದಲ್ಲಿ ಮಹಜರ್ ಬರೆದುಕೊಂಡರು. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಮಹಜರ್ ನ್ನು ಬೆಳಿಗ್ಗೆ *11* ರಿಂದ *12* ಗಂಟೆಯವರೆಗೆ

ಜರುಗಿಸಿದರು. ನಾನು ಈಗ ಸದರಿ ದಾಖಲೆಯನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-*2* ಎಂದು, ಸಾಕ್ಷಿಯ ಸಹಿಯನ್ನು ನಿಪಿ-*2*(ಎ) ಎಂದು ಗುರುತಿಸಲಾಯಿತು. ಪೊಲೀಸ್ ರು ಚಾಸಾ-*2* ಹಾಗೂ *3* ಅವರ ಹೇಳಿಕೆಯನ್ನು ಮಾಡಿಕೊಂಡರು. ನಂತರ ಪೊಲೀಸ್ ರನ್ನು ನಾನು ನಮ್ಮ ಮನೆಗೆ ಕರೆದುಕೊಂಡು ಬಂದೆನು. ಮನೆಯನ್ನು ಪರಿಶೀಲಿಸಿದರು ಹಾಗೂ ಮನೆಯಲ್ಲಿ ಎಲ್ಲಿ ದುಡ್ಡು ಕೊಟ್ಟಿರುವುದು ಎಂದು ನಾನು ತೋರಿಸಿದೆ. ನನ್ನ ಮನೆಯಲ್ಲಿ ಪೊಲೀಸ್ ರು ಮಹಜರ್ ನ್ನು ಮಧ್ಯಾಹ್ನ *12.15* ಗಂಟೆಯಿಂದ *1* ಗಂಟೆಯವರೆಗೆ ಜರುಗಿಸಿದರು. ನನ್ನ ಮನೆ ಹಳ್ಳದಕೇರಿಯಲ್ಲಿ ಇದ್ದು, ಅಲ್ಲಿ ಆರೋಪಿ ನನ್ನಿಂದ ಒಂದುವರೆ ಲಕ್ಷ ರೂವನ್ನು ತೆಗೆದುಕೊಂಡ ವಿಷಯವಾಗಿ ಮಹಜರ್ ಜರುಗಿಸಿದರು. ನಾನು ಈಗ ಸದರಿ ಮಹಜರ್ ನ್ನು ನೋಡುತ್ತಿದ್ದು, ಅದರ ಮೇಲೆ ನನ್ನ ಸಹಿ ಇದೆ. ಸದರಿ ಮಹಜರ್ ನ್ನು ನಿಪಿ-*3* ಎಂದು ಸಾಕ್ಷಿಯ ಸಹಿಯನ್ನು ನಿಪಿ-*3*(ಎ) ಎಂದು ಗುರುತಿಸಲಾಯಿತು. ನಂತರ ಪೊಲೀಸ್ ರನ್ನು ನರಸಿಪುರದ ಸೇತುವೆ ಹತ್ತಿರ ಇರುವ ಶಾಲೆ ಅಂದರೆ ಆರೋಪಿಗಳು ನನ್ನನ್ನು ಕರೆದುಕೊಂಡು ಹೋದ ಜಾಗಕ್ಕೆ ನಾನು ಕರೆದುಕೊಂಡು ಹೋದೆನು. ನಾನು ಅಲ್ಲಿ ಪೊಲೀಸ್ ರಿಗೆ ಅಲ್ಲಿ ನಡೆದ ಘಟನೆಯನ್ನು ವಿವರಿಸಿದೆ. ಆರೋಪಿಗಳು ನನಗೆ *25* ಲಕ್ಷ ರೂ ಕೇಳಿರುವ ಬಗ್ಗೆ, *1* ನೇ ಆರೋಪಿ ಹನುಮಂತ ಪಾಟೀಲ್ ಅಲ್ಲಿ ಬಂದಿರುವ ಬಗ್ಗೆ, ನನ್ನಿಂದ ದಾಖಲೆ ಪಡೆದ ಬಗ್ಗೆ ನಾನು ಪೊಲೀಸ್ ರಿಗೆ ವಿವರಿಸಿದೆ. ನಂತರ ಪೊಲೀಸ್ ರು ಸ್ಥಳವನ್ನು ಪರಿಶೀಲಿಸಿ, ನಂತರ *4.30* ಗಂಟೆಗೆ ಮನೆಗೆ ವಾಪಸ್ಸು ಬಂದೆವು.

ನಂತರ ದೂರು ದಾಖಲಾದ *2-3* ತಿಂಗಳ ನಂತರ ಪೊಲೀಸ್ ರು ನಾನಾಗೆ ಪೊಲೀಸ್ ಠಾಣೆಗೆ ಹೋಗಿ ಕೇಳಿದಾಗ *61* ಸಾವಿರವನ್ನು *1* ನೇ ಆರೋಪಿ ಹನುಮಂತ ಪಾಟೀಲ್, *2* ನೇ ಆರೋಪಿ ಶ್ರೀನಿವಾಸ್ ಹಾಗೂ *4* ನೇ ಆರೋಪಿ ಬದ್ರೀಶ್ ಕುಮಾರ್ ನಿಂದ ವಶಪಡಿಸಿಕೊಂಡಿದ್ದೇವೆ ಎಂದು ಹೇಳಿದರು. ನಾನು ಸದರಿ ದುಡ್ಡನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದುಡ್ಡಿನಲ್ಲಿ *500* ಹಾಗೂ *100* ರೂಗಳ ನೋಟುಗಳು ಇದ್ದವು. ನಾನು ಈಗ *500* ರೂಗಳ *60* ನೋಟುಗಳನ್ನು ನೋಡುತ್ತಿದ್ದು, ಅವುಗಳನ್ನು ಗುರುತಿಸುತ್ತೇನೆ, ಸದರಿ ನೋಟುಗಳನ್ನು ಮುಮಾ-*1* ಎಂದು ಗುರುತಿಸಲಾಯಿತು. ನಾನು ಈಗ *500* ರೂಗಳ *36* ನೋಟುಗಳನ್ನು ನೋಡುತ್ತಿದ್ದು, ಅವುಗಳನ್ನು

ಗುರುತಿಸುತ್ತೇನೆ, ಸದರಿ ನೋಟುಗಳನ್ನು ಮುಮಾ-*2* ಎಂದು ಗುರುತಿಸಲಾಯಿತು. ನಾನು ಈಗ *500* ರೂಗಳ *26* ನೋಟುಗಳನ್ನು ನೋಡುತ್ತಿದ್ದು, ಅವುಗಳನ್ನು ಗುರುತಿಸುತ್ತೇನೆ, ಸದರಿ ನೋಟುಗಳನ್ನು ಮುಮಾ-*3* ಎಂದು ಗುರುತಿಸಲಾಯಿತು.

ನನ್ನನ್ನು ಹೆದರಿಸಲು ಉಪಯೋಗಿಸಿದ ಮಚ್ಚು ಲಾಂಗುಗಳನ್ನು ನೋಡಿದರೆ ಗುರುತಿಸುತ್ತೇನೆ. ನಾನು ಈಗ ನನ್ನನ್ನು ಹೆದರಿಸಲು ಉಪಯೋಗಿಸಿದ ಮಚ್ಚನ್ನು ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ, ಸದರಿ ಮಚ್ಚನ್ನು ಮುಮಾ-*4* ಎಂದು ಗುರುತಿಸಲಾಯಿತು. ಈಗ ನಾನು ನನ್ನನ್ನು ಹೆದರಿಸಲು ಉಪಯೋಗಿಸಿದ ಇನ್ನೊಂದು ಮಚ್ಚನ್ನು ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ, ಸದರಿ ಮಚ್ಚನ್ನು ಮುಮಾ-*5* ಎಂದು ಗುರುತಿಸಲಾಯಿತು. ಈಗ ನನ್ನನ್ನು ಹೆದರಿಸಲು ಉಪಯೋಗಿಸಿದ ಇನ್ನೊಂದು ಮಚ್ಚನ್ನು ನಾನು ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ, ಸದರಿ ಮಚ್ಚನ್ನು ಮುಮಾ-*6* ಎಂದು ಗುರುತಿಸಲಾಯಿತು. ನಾನು ಈಗ ನನ್ನಿಂದ ಆರೋಪಿಗಳ ವಶಪಡಿಸಿಕೊಂಡು ಸೇಲ್ ಡೀಡ್ ಜೆರಾಕ್ಸನ್ನು ನೋಡುತ್ತಿದ್ದು, ಅದನ್ನು ನಿಪಿ-*4* ಎಂದು ಗುರುತಿಸಲಾಯಿತು. ನಾನು ಈಗ ಆರೋಪಿಗಳು ನನ್ನಿಂದ ವಶಪಡಿಸಿಕೊಂಡ ಪಟ್ಟಾ ಮತ್ತು ರಶೀದಿ ಪುಸ್ತಕವನ್ನು ನೋಡುತ್ತಿದ್ದು, ಅವುಗಳನ್ನು ಗುರುತಿಸುತ್ತೇನೆ. ಎರಡು ಪಟ್ಟಾ ಮತ್ತು ರಶೀದಿ ಪುಸ್ತಕಗಳನ್ನು ಒಟ್ಟಾಗಿ ನಿಪಿ-*5* ಎಂದು ಗುರುತಿಸಲಾಯಿತು. ನಾನು ಈಗ *11* ಬಿ ಎಕ್ಸಟ್ರಾಕ್ಟನ ಪ್ರತಿಯನ್ನು ನೋಡುತ್ತಿದ್ದು, ಅದನ್ನು ಗುರುತಿಸುತ್ತೇನೆ. ಸದರಿ ಎಕ್ಸಟ್ರಾಕ್ಟನ್ನು ನಿಪಿ-*6* ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸರ್ಕಾರಿ ಅಭಿಯೋಜಕರು ಸಮಯಾವಕಾಶ ಕೇಳಿದ್ದರಿಂದ, ಸಮಯವನ್ನು ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

**07.12.2019**

*1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*